-1-

Print

# Karnataka Lokayukta

**(Under Section 7 of the Karnataka Lokayukta Act, 1984)**

CASE NUMBER : **COMPT/LOK/BCD/946/2019**

District : **Bangalore (U)**

**BY :**

**1. SUO MOTO,**

As per the Order of Honble Lokayukta Date: 27/03/2019

**COMPLAINANT/S**

**AGAINST :**

**1. CHAIRMAN,**

Bengaluru Water Supply and Sewerage Board, Cauvery Bhavan, K.G. Road, BENGALURU. 560009

**2. CHIEF ENGINEER,**

Maintenance Zone, Cauvery Bhavan, K.G. Road, BENGALURU.

**3. DEPUTY COMMISSIONER,**

Bengaluru Urban District, Kempegowda Road, BENGALURU. 560009

**4. COMMISSIONER,**

Bengaluru Mahanagara Palike, N.R. Square, BENGALURU. 560002

**RESPONDENT/S**

| | |
|---|---|
| **Allegation/Grievance Brief :** | Dereliction of Duty. |
| Received From : | By Suo Moto. |
| Received On : | 27-03-2019 |

B. [signature] 27/3/19

**Seal and Signature**

| | |
|---|---|
| **Complaint stands allotted to :** | **ARE-1** |

**SCRUTINY AND OPINION**

LOK/BCD/946/2019/ARE-1

- 2 -

**KARNATAKA LOKAYUKTA : BENGALURU**

Date: 27-03-2019

**ORDER**

The Prajavani – a Kannada daily newspaper dated 10/03/2019 and 11/03/2019 has published two news items with the title "ಬೇಸಿಗೆ ಆರಂಭದಲ್ಲೇ ಕುಡಿವ ನೀರಿಗೆ ಹಾಹಾಕಾರ" and "ನೀರಿಲ್ಲದೆ ಬೇಯುತ್ತಿದೆ ಬೆಳ್ಳಂದೂರು".

2. The news item published in the caption referred to above, has highlighted the condition prevailing in the various parts of Bengaluru city on account of scarcity of water supply. The said article reveals the hardship suffered by the residents at various localities within the limits of BBMP in getting drinking water for their daily usage, which is one of the most essential necessities for human survival.

3. It is useful to extract the said news items which reads as follows:

**Prajavani daily dated 10/03/2019**

ಪೈಪ್‌ಲೈನ್ ಇದ್ದರೂ ಪೂರೈಕೆ ಇಲ್ಲ

"ಬೊಮ್ಮನಹಳ್ಳಿ: ಬೇಸಿಗೆ ಈಗತಾನೆ ಕಾಲಿಟ್ಟಿದೆ. ಆದರೆ, ಅದಾಗಲೇ ತಾಪಮಾನ ದಾಖಲೆಯ ಮಟ್ಟವನ್ನು ತಲುಪುತ್ತಿದ್ದು, ನೀರಿನ ಸಮಸ್ಯೆ ಕೂಡ ಅದರ ಬೆನ್ನೇರಿಕೊಂಡು ಬಂದಿದೆ. ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಯಾದ ಪ್ರದೇಶಗಳಲ್ಲಿ ಸಮರ್ಪಕ ನೀರು ಪೂರೈಕೆಯಿಲ್ಲದೆ ಹಾಹಾಕಾರ ಎದ್ದಿದೆ.

ಬೊಮ್ಮನಹಳ್ಳಿ ಪ್ರದೇಶದಲ್ಲಿ ಸದಾ ಕಾಡುವ ನೀರಿನ ಸಮಸ್ಯೆ ಬೇಸಿಗೆಯಲ್ಲಿ ಪ್ರತಿ ವರ್ಷವೂ ಉಲ್ಬಣಗೊಳ್ಳುತ್ತದೆ. ವಿವಿಧ ಯೋಜನೆಗಳಿಗಾಗಿ

ಸಾವಿರಾರು ಕೋಟಿ ರೂಪಾಯಿ ಹರಿದು ಬಂದಿದ್ದರೂ ನೀರಿನ ಬರ ತಪ್ಪಿಲ್ಲ. ಬಿಬಿಎಂಪಿಗೆ ಸೇರ್ಪಡೆ ಆದಲ್ಲಿ ಎಲ್ಲ ಸಮಸ್ಯೆಗಳಿಗೂ ಪರಿಹಾರ ಸಿಗಲಿದೆ ಎಂಬ ಜನರ ನಿರೀಕ್ಷೆ ದಶಕದ ನಂತರವೂ ನಿರೀಕ್ಷೆಯಾಗಿಯೇ ಉಳಿದಿದೆ.

ಬೊಮ್ಮನಹಳ್ಳಿ ವಲಯದ ಬಹಳಷ್ಟು ಪ್ರದೇಶಗಳಿಗೆ ಕಾವೇರಿ ನೀರಿನ ಪೈಪ್‌ಲೈನ್ ಹಾಕಲಾಗಿದ್ದರೂ ಇನ್ನೂ ಪೂರೈಕೆ ಮಾಡುತ್ತಿಲ್ಲ. ಕೆಲವೆಡೆ ವಾರಕ್ಕೆ ಎರಡು ದಿನ ನೀರು ಬಿಡಲಾಗುತ್ತಿದೆ. ಅದೂ ಒಂದು ಗಂಟೆ ಮಾತ್ರ. ಕಾವೇರಿ ನೀರಿನ ಸಂಪರ್ಕ ಇಲ್ಲದಿರುವ ಕಡೆ ಟ್ಯಾಂಕರ್ ನೀರೇ ಗತಿ ಎಂಬಂತಾಗಿದೆ.

'ಬಂಡೇಪಾಳ್ಯದಲ್ಲಿ ಹತ್ತು ದಿನಕ್ಕೊಮ್ಮೆ ನೀರು ಸಿಗುತ್ತಿದೆ, ಒಂದು ಗಂಟೆ ಮಾತ್ರ ನೀರು ಬಿಡುತ್ತಾರೆ, ಇದು ಏನಕ್ಕೂ ಸಾಲುವುದಿಲ್ಲ' ಇನ್ನುತಾರೆ ಬಂಡೇಪಾಳ್ಯದ ಗೃಹಿಣಿ ರೇಖಾ ರಾಮಚಂದ್ರ.

ಟ್ಯಾಂಕರ್ ನೀರನ್ನೇ ಅವಲಂಬಿಸಿರುವ ಕುಟುಂಬವೊಂದು ತಿಂಗಳಿಗೆ 3000 ದಿಂದ 4000 ರೂಪಾಯಿ ನೀರಿಗಾರಿಯೇ ಮೀಸಲಿಡಬೇಕಿದೆ. ಟ್ಯಾಂಕರ್ ನೀರು ಕುಡಿಯಲು ಯೋಗ್ಯವಲ್ಲದ ಕಾರಣ, ಕುಡಿಯುವ ನೀರಿಗಾಗಿ ತಿಂಗಳಿಗೆ 250 ರೂಪಾಯಿ ತೆತ್ತು ಕ್ಯಾನ್ ನೀರು ತರಬೇಕು. ಇದರ ಶುದ್ಧತೆಯ ಬಗ್ಗೆ ಯಾವುದೇ ಖಾತ್ರಿ ಇಲ್ಲ.

**ಟ್ಯಾಂಕರ್ ನೀರಿಗೆ 1000 ರೂಪಾಯಿ:** ಮಳೆಗಾಲದಲ್ಲಿ 6 ಸಾವಿರ ಲೀಟರ್‌ನ ಟ್ಯಾಂಕರ್ ನೀರಿಗೆ 500 ರೂಪಾಯಿ ಇದ್ದದ್ದು, ನೀರಿನ ಕೊರತೆ ಇದೆ ಎಂಬ ಕಾರಣಕ್ಕೆ ಈಗ ರೂ.1,000 ದಿಂದ ರೂ.1,200 ಕೊಟ್ಟು ನೀರು ಕೊಂಡುಕೊಳ್ಳಬೇಕಿದೆ. ಕಡಿಮೆ ನೀರು ಹಾಕಿ, ಇದರಲ್ಲೂ ಮೋಸ ಮಾಡುವವರೂ ಇದ್ದಾರೆ. ಜತೆಗೆ ದುಡ್ಡು ಕೊಟ್ಟರೂ ಬೇಕಾದ ಸಮಯಕ್ಕೆ ನೀರು ಸಿಗುವುದಿಲ್ಲ ಎಂಬುದು ನಿವಾಸಿಗಳ ಅಳಲು.

**ಬೇಗೂರು ಕೆರೆ ನೀರು ಖಾಲಿ:** ಬೇಗೂರು ಕೆರೆ ತೀರ ಪ್ರದೇಶಗಳಾದ ಚಿಕ್ಕಬೇಗೂರು, ವಿಶ್ವಪ್ರಿಯ ಬಡಾವಣೆ, ಮೈಕೊ ಬಡಾವಣೆ, ಲಕ್ಷ್ಮಿ ಲೇಔಟ್, ಗಾರ್ವೆಬಾವಿಪಾಳ್ಯ ಸೇರಿದಂತೆ ಹಲವು ಪ್ರದೇಶಗಳಲ್ಲಿ ಅಂತರ್ಜಲ ತೀವ್ರವಾಗಿ ಕುಸಿದಿದೆ. ದೊಡ್ಡ ಬೇಗೂರು ಕೆರೆಯ ಅಭಿವೃದ್ಧಿಗಾಗಿ ಮೂರು ತಿಂಗಳ ಹಿಂದೆ ಕಾಮಗಾರಿ ಕೈಗೆತ್ತಿಕೊಳ್ಳಲು ನೀರನ್ನು ಖಾಲಿ ಮಾಡಲಾಗಿತ್ತು. ಕಾಮಗಾರಿ ವಿಳಂಬವಾಗುತ್ತಿದ್ದು, ಇದರ ಪರಿಣಾಮ ಕೆರೆ ತೀರದ ಪ್ರದೇಶಗಳಲ್ಲಿ ಅಂತರ್ಜಲ ಕುಸಿದು, ಶೇಕಡ 80ರಷ್ಟು ಕೊಳವೆಬಾವಿಗಳು ಬತ್ತಿ ಹೋಗಿವೆ. ಇದರಿಂದಾಗಿ ಟ್ಯಾಂಕರ್ ನೀರಿಗೆ ಬೇಡಿಕೆ ಹೆಚ್ಚಾಗಿದೆ.

'ನಮ್ಮ ಅಪಾರ್ಟ್‌ಮೆಂಟ್‌ನಲ್ಲಿ 18 ಕುಟುಂಬಗಳು ವಾಸ ಇವೆ. ನಮಗೆ ಕಾವೇರಿ ನೀರಿನ ಸಂಪರ್ಕ ಇಲ್ಲ. ಟ್ಯಾಂಕರ್ ನೀರು ಬಳಸುತ್ತೇವೆ. ತಿಂಗಳಿಗೆ ರೂ.37,000 ನೀರಿಗಾಗಿ ಖರ್ಚು ಮಾಡುತ್ತಿದ್ದೇವೆ' ಎಂದು ತಮ್ಮ ಅಳಲು ತೋಡಿಕೊಳ್ಳುತ್ತಾರೆ ಗೃಹಿಣಿ ಪೂರ್ಣಿಮಾ.

ಖಾಸಗಿ ಟ್ಯಾಂಕರ್ ನೀರು ಪೂರೈಕೆದಾರರು ಕೂಡ ಚಂದಾಪುರ, ಗೊಟ್ಟಿಗೆರೆ ಸೇರಿದಂತೆ ದೂರದ ಪ್ರದೇಶಗಳಿಂದ ನೀರು ತರಬೇಕಿದೆ. ಹೀಗಾಗಿ 'ದರ ಹೆಚ್ಚು ಮಾಡದೇ ಬೇರೆ ದಾರಿ ಇಲ್ಲ'ಎನ್ನುತ್ತಾರೆ ಟ್ಯಾಂಕರ್ ನೀರು ಪೂರೈಕೆದಾರ ಲೋಕನಾಥನ್.

**ಗೊಟ್ಟಿಗೆರೆಯಲ್ಲಿ ಹೊಸದಾಗಿ ಜಿಎಲ್‌ಆರ್:** ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡ 110 ಹಳ್ಳಿಗಳಿಗೆ ಕಾವೇರಿ ನೀರು ಸಂಪರ್ಕ ಕಲ್ಪಿಸುವ ಕಾಮಗಾರಿ ಕೆಲವೆಡೆ ಮುಗಿದಿದ್ದರೆ, ಮತ್ತೆ ಕೆಲವೆಡೆ ಪ್ರಗತಿಯಲ್ಲಿದೆ. ಪೈಪ್‌ಲೈನ್ ಹಾಕಿರುವ ಕಡೆ ನೀರು ಪೂರೈಕೆ ಮಾಡಲಾಗುತ್ತಿದೆಯಾದರೂ ಸದ್ಯ ಪೂರೈಕೆ ಆಗುತ್ತಿರುವ ಪ್ರದೇಶಗಳಿಗೆ ಸ್ವಲ್ಪ ಕಡಿತ ಮಾಡಿ ನೀಡಲಾಗುತ್ತಿದೆ.

ಗೊಟ್ಟಿಗೆರೆ ಬಳಿ ಜಿಎಲ್‌ಆರ್ ಘಟಕ ಸ್ಥಾಪನೆಗೆ ಉಪಮುಖ್ಯಮಂತ್ರಿ ಜಿ.ಪರಮೇಶ್ವರ ಕೆಲದಿನಗಳ ಹಿಂದೆಯಷ್ಟೇ ಶಂಕುಸ್ಥಾಪನೆ ನೆರವೇರಿಸಿದ್ದರು. ಅದು ಪೂರ್ಣಗೊಳ್ಳಲು ಎರಡು ವರ್ಷವಾಗಳಾದರೂ ಬೇಕು ಎನ್ನುತ್ತಾರೆ ಎಇಇ ವಿನಯಕುಮಾರಿ. ಬೇಸಿಗೆ ಎದುರಿಸಲು ಏನಾದರು ವಿಶೇಷ ಯೋಜನೆ ಇದೆಯೇ ಎಂಬ ಪ್ರಶ್ನೆಗೆ 'ಇಲ್ಲ' ಎಂದು ಉತ್ತರಿಸುತ್ತಾರೆ".

## Prajavani daily dated 11/03/2019

### ನೀರಿಲ್ಲದೆ ಬೇಯುತ್ತಿದೆ ಬೆಳ್ಳಂದೂರು

"ಬೆಂಗಳೂರು: ಬೆಳ್ಳಂದೂರಿನ ಪ್ರದೇಶಗಳ ರಸ್ತೆಗಳಲ್ಲಿ ಮಳೆಗಾಲದಲ್ಲಿ ನೀರು ಪ್ರವಾಹದಂತೆ ಹರಿಯುತ್ತಿತ್ತು. ಈಗ ಈ ಪ್ರದೇಶಗಳಲ್ಲಿ ಒಂದು ಕೊಡ ನೀರಿಗೂ ಕೊರತೆ ಕಂಡುಬರುತ್ತಿದೆ.

ಕೊಳವೆ ಬಾವಿಗಳು ಬತ್ತಿಹೋಗಿ, ಇತ್ತ ಕಾವೇರಿ ನೀರಿನ ಸಂಪರ್ಕವಿಲ್ಲದೆ, ಅತ್ತ ಟ್ಯಾಂಕರ್ ನೀರೂ ಸಿಗದೆ ಇಲ್ಲಿನ ಪ್ರದೇಶಗಳ ನಿವಾಸಿಗಳು ನೀರಿಗಾಗಿ ಪರದಾಡುತ್ತಿದ್ದಾರೆ. ಈಗಾಗಲೆ ಅಪಾರ್ಟ್‌ಮೆಂಟ್‌ಗಳಲ್ಲಿ 'ನೀರಿನ ಪಡಿತರ'ವೂ ಆರಂಭವಾಗಿದೆ. ಹಾಗಾಗಿ ನೀರಿನ ಮಹತ್ವ ಮತ್ತು ಮಿತ ಬಳಕೆಯ ಮಾತು ಮುನ್ನೆಲೆಗೆ ಬಂದಿದೆ.

ಬೆಳ್ಳಂದೂರು ಆಸುಪಾಸಿನ ಕಸವನಹಳ್ಳಿ, ಹರಳೂರು, ಸರ್ಜಾಪುರ ರಸ್ತೆ, ಮಹಾದೇವಪುರದಲ್ಲಿ ನೀರಿನ ಹಾಹಾಕಾರ ಹೆಚ್ಚುತ್ತಿದೆ. ಈ ಪ್ರದೇಶಗಳ ಸಮೀಪವೇ ಮಾಹಿತಿ ತಂತ್ರಜ್ಞಾನದ (ಐಟಿ–ಬಿಟಿ) ನೂರಾರು ಕಂಪನಿಗಳಿವೆ. ಆದ್ದರಿಂದ ಈ ಪ್ರದೇಶಗಳಲ್ಲಿ ಬಹುಮಹಡಿ ಕಟ್ಟಡಗಳ ಅಪಾರ್ಟ್‌ಮೆಂಟ್‌ಗಳು ತಲೆಎತ್ತಿವೆ. ಇನ್ನೂ ಎದ್ದು ನಿಲ್ಲುತ್ತಿವೆ.

ಮಳೆಗಾಲ ಮತ್ತು ಚಳಿಗಾಲದಲ್ಲಿ ಕೊಳವೆಬಾವಿಗಳ ನೀರಿನಿಂದ ಈ ಅಪಾರ್ಟ್‌ಮೆಂಟ್ ವಾಸಿಗಳು ನೀರಿನ ಅಗತ್ಯತೆಯನ್ನು ಪೂರೈಸಿಕೊಳ್ಳುತ್ತಿದ್ದರು. ಈ ಬೇಸಿಗೆಯ ಆರಂಭದಲ್ಲಿಯೇ ಕೊಳವೆ ಬಾವಿಗಳು ಬತ್ತಿಹೋಗುತ್ತಿವೆ. ಹಾಗಾಗಿ ಇವರು ಈಗ ಸಂಪೂರ್ಣವಾಗಿ ಟ್ಯಾಂಕರ್ ನೀರಿನ ಮೇಲೆಯೇ ಅವಲಂಬಿತರಾಗಿದ್ದಾರೆ. 'ಖರೀದಿಸಿದ ನೀರನ್ನು' ಬೆಳಿಗ್ಗೆ ಮತ್ತು ಸಂಜೆಯ ನಿಗದಿತ ಸಮಯದಲ್ಲಿ ಒಂಡೆರಡು ಗಂಟೆ ಮಾತ್ರ ಸಂಪ್‌ಗಳಿಂದ ಸರಬರಾಜು ಮಾಡಲಾಗುತ್ತಿದೆ.

**'ನೀರಿನ ಮಾಫಿಯಾ':** ಬೇಸಿಗೆಯ ಆರಂಭಕ್ಕೂ ಮುನ್ನ 6,000 ಲೀಟರ್ ಸಾಮರ್ಥ್ಯದ ಟ್ಯಾಂಕರ್ ನೀರಿಗೆ ರೂ.400 ಇತ್ತು. ಈಗ ಅದರ ದರ ರೂ.1,500 ದಾಟುತ್ತಿದೆ. 'ಕಸವನಹಳ್ಳಿಯಲ್ಲಿ ದುಡ್ಡು ಕೊಟ್ಟರೂ ನೀರು ಸಿಗುತ್ತಿಲ್ಲ. ಟ್ಯಾಂಕರ್ ನೀರಿಗಾಗಿ ಕರೆ ಮಾಡಿದರೆ, ನೀರು ಮನೆಗೆ ಬರಲು ಎರಡು ದಿನ ಕಾಯುವ ಸ್ಥಿತಿ ಇದೆ' ಎಂದು ಸ್ಥಳೀಯರಾದ ವಿಷ್ಣು ತಿಳಿಸಿದರು.

'ಪ್ರತಿ ಬೇಸಿಗೆಯಲ್ಲೂ ಟ್ಯಾಂಕರ್ ನೀರಿನ ದರ ಇದ್ದಕ್ಕಿದ್ದಂತೆ ಹೆಚ್ಚಳ ಆಗುತ್ತದೆ. ಟ್ಯಾಂಕರ್ ನೀರು ಪೂರೈಕೆದಾರರು ಮನಸ್ಸಿಗೆ ಬಂದಂತೆ ದರ ನಿಗದಿ ಮಾಡುತ್ತಿದ್ದಾರೆ. ಇದಕ್ಕೆಲ್ಲ ಜಲಮಂಡಳಿ ಕಡಿವಾಣ ಹಾಕಬೇಕು' ಎಂದು ಬೆಳ್ಳಂದೂರು ಅಭಿವೃದ್ಧಿ ವೇದಿಕೆಯ ಸದಸ್ಯೆ ನೀತು ಟಂಡನ್ ಒತ್ತಾಯಿಸಿದರು.

'ನಮ್ಮ ಕೊಳವೆ ಬಾವಿಗಳು ಸಹ ಬತ್ತಿಹೋಗಿವೆ. ಬೇರೆ ಪ್ರದೇಶಗಳಿಂದ ನೀರನ್ನು ತರಬೇಕಿದೆ. ಹಾಗಾಗಿ ದರ ಹೆಚ್ಚಳ ಮಾಡಿದ್ದೇವೆ' ಎಂದು ಟ್ಯಾಂಕರ್ ನೀರು ಪೂರೈಕೆದಾರರು ತಿಳಿಸಿದರು".

4. Right to life guaranteed under Article 21 of the Constitution of India guarantees that the basic necessities for survival of a person would be provided to each and every individual. Right to Life is not mere existence, but it

guarantees existence with all the necessities required for a person. Scarcity of water in the recent years has been a reality, as such, huge amount of fund is allocated by the government for supply of drinking water to the citizens. Several schemes have been floated to supply water in various localities.

5. The news item published on 10/03/2019, referred to above, indicates that inspite of installation of pipeline, no sufficient drinking water is supplied to the residents at Bommanahalli. The article also highlights that during rainy season a tanker containing 6000 litres of water is sold at Rs. 500/- which is sold for Rs. 1,000/- to 1,200/- during summer season, due to scarcity of water. The article also indicates that huge amount is spent by residents within the limits of BBMP to purchase drinking water.

6. The news item published on 11/03/2019, extracted above, indicates that supply of water is provided only half an hour in a day at Ejipura and that the staff of Bengaluru Water Supply & Sewerage Board do not respond to the call of the residents to request supply of water through tankers.

7. Both the news items referred to above, indicate that the public at large is facing hardship in getting sufficient drinking water. In this back ground, it is significant to note that the authorities of BWSSB as well as BBMP are required to monitor and provide adequate supply of

drinking water to the people residing within the limits of Bengaluru. The authorities cannot turn a blind eye for the grievance of the public at large especially when there are allegations that the drinking water is supplied at an unreasonable rate on preferential basis. It has also came to notice of the Lokayukta that there is mal-administration in difference of rates by the tankers hired/used by BWSSB on account of extraneous reasons.

8. Therefore, considering the news articles as source material, I am inclined to institute suo-moto proceedings for the purpose of investigation relating to the dereliction of duty on the part of officers/officials who are required to take immediate remedial measures for redressal of the grievance of the public at large. Accordingly, suo-moto proceedings is initiated in exercise of power conferred on me under Sections 7(1)(b) and 9(3)(a) of the Karnataka Lokayukta Act, 1984. The Office is directed to register a case as suo-moto proceedings and issue notice to the following officers and implead them as Respondents:

1. The Chairman,
   Bengaluru Water Supply & Sewerage Board,
   Cauvery Bhavan, K.G.Road,
   Bengaluru-560 009.

2. The Chief Engineer,
   Maintenance Zone,
   Cauvery Bhavan, K.G.Road,
   Bengaluru-560 009.

3. Deputy Commissioner,
   Bengaluru Urban District,
   Kempegowda Road,
   Bengaluru-560 009.

4. The Commissioner,
   Bengaluru Mahanagara Palike,
   N.R.Square, Bengaluru-560 002.

9. It is needless to point out that failure on the part of the authorities concerned, in my considered view, amounts to 'mal-administration' within the meaning of Section 2(10) of Karnataka Lokayukta Act, 1984 which calls for investigation. Due to summer, there may be shortage of water. As such, the system is required to be kept in place. Therefore, in the light of what is stated above, issue notices to the officers/officials mentioned above. They are directed to submit their report by specifying the details on the following:

a) Budgetary allotment made for supply of drinking water to various parts of Bengaluru, with reference to each area;

b) The money collected from the public for supply of drinking water and the facilities provided so far, with reference to each area;

c) The details of vehicles hired for supply of drinking water with details of amount spent for such hiring, with reference to each area;

d) Details of water supplied for each month in each area;

e) Details of the contractors employed by BWSSB/BBMP for supply of water in each area;

f) All other relevant information required for effective and punctual distribution of water by BWSSB/BBMP for the public.

10. The Office is directed to issue notices to the officers/officials through e-mail, by post and through Lokayukta Police along with copy of this order as well as the copy of paper publications referred to above.

11. The information sought above and steps taken to improve the quality of distribution of drinking water along with comments/status report are required to be furnished within four weeks from today.

List this case on **25-04-2019 at 3.00 p.m.**

**(Justice P. Vishwanatha Shetty),**
Lokayukta,
Karnataka State.

27/3/2019

AS*

12) Compts. Section (ARLO-4) }

ARE-1.

೧) 25/04/2019.
ಗೌ. ಲೋಕಾಯುಕ್ತ-
-ರವರ ಆದೇಶದಂತೆ
ಎದುರುದಾರರಿಗೆ ನೋಟಿಸ್
ಜಾರಿ ಮಾಡಿದ್ದು, ಸ್ವೀಕೃತಿ
ಹೊಂದಿದೆ.



ಮುಖ್ಯ ಅಭಿಯಂತರರು (ನಿರ್ವಹಣೆ)
ಬೆಂಗಳೂರು ಜಲಮಂಡಳಿ ರವರ
ಪತ್ರದ ದಿ: 23/04/19 ಬಂದಿರುತ್ತದೆ.

# KARNATAKA LOKAYUKTA : BENGALURU

No: Compt/Lok/BCD-946/2019/ARE-1 Date: 25-04-2019

## ORDER

Sri. B.M. Vijay Shankar, Deputy Commissioner, Bengaluru Urban District is present.

2. Sri. Gangadhar, Chief Engineer, Bengaluru Water Supply and Sewerage Board (herein after referred to **'BWSSB'** for short), Bengaluru is present.

3. Though the notice has been served on the Respondent No.4 – the Commissioner, Bruhat Bengaluru Mahanagara Palike, neither the Commissioner nor his representative is present.

4. On behalf of the Deputy Commissioner, Bengaluru Urban District, a status report dated 24-04-2019 has been filed. It is useful to extract the said report, which reads as follows:

LOK/BCD-946/2019. - 11 -

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಎಎಲ್/ಸಿಆರ್/05/2019-20.

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 24-04-2019.

ಗೆ,
ಅಪರ ನಿಬಂಧಕರು
ವಿಚಾರಣೆಗಳು-1,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಮಾನ್ಯರೆ,

**ವಿಷಯ:-** ದಿನಪತ್ರಿಕೆಯಲ್ಲಿ ಪ್ರಕಟಗೊಂಡ ವಿಷಯದನ್ವಯ ಸಂಸ್ಥೆಯಲ್ಲಿ ದಾಖಲಾಗಿರುವ ಸ್ವಯಂಪ್ರೇರಿತ ದೂರಿನ ಕುರಿತು.

**ಉಲ್ಲೇಖ:-** ತಮ್ಮ ಕಛೇರಿ ನೋಟೀಸ್ ಪತ್ರ ಸಂಖ್ಯೆ.ಕಂ.ಲೋಕ್.ಬಿಸಿಡಿ 946 /2019, ದಿನಾಂಕ: 30-03-2019.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗೌರವಾನ್ವಿತ ಲೋಕಾಯುಕ್ತರವರು ದಿನಾಂಕ: 27-03-2019ರಂದು ಹೊರಡಿಸಿರುವ ಆದೇಶದಲ್ಲಿ ತಿಳಿಸಿರುವ ವರದಿ/ಹೇಳಿಕೆಯೊಂದಿಗೆ ದಿನಾಂಕ: 25-04-2019 ರಂದು 3-00 ಗಂಟೆಗೆ ಖುದ್ದು ಹಾಜರಾಗಲು ನಿರ್ದೇಶಿಸಲಾಗಿರುತ್ತದೆ.

ದಿನಾಂಕ: 27-03-2019ರ ಆದೇಶದಲ್ಲಿ ಪ್ರಜಾವಾಣಿ ದಿನಪತ್ರಿಕೆ ದಿನಾಂಕ: 10-03-2019 ಮತ್ತು 11-03-2019ರ ಪತ್ರಿಕಾ ಪ್ರಕಟಣೆಯಲ್ಲಿ "ಬೇಸಿಗೆ ಆರಂಭದಲ್ಲೇ ಕುಡಿಯುವ ನೀರಿಗೆ ಹಾಹಾಕಾರ & "ನೀರಿಲ್ಲದೆ ಬೇಯುತ್ತಿದೆ ಬೆಳ್ಳಂದೂರು" ಎಂದು ಪ್ರಕಟಣೆಗೊಂಡಿರುವುದು ಕಂಡುಬಂದಿರುತ್ತದೆ. ಅದರಂತೆ ಪರಿಶೀಲಿಸಲಾಗಿ ಬೊಮ್ಮನಹಳ್ಳಿ/ಗೊಟ್ಟಿಗೆರೆ ಗ್ರಾಮವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಮುಂದುವರೆದು ಬೆಳ್ಳಂದೂರು ಗ್ರಾಮವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಕುಡಿಯುವ ನೀರನ್ನು ಸಾರ್ವಜನಿಕರಿಗೆ ಒದಗಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಕ್ರಮವಹಿಸಬೇಕಾಗಿರುತ್ತದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಸಹಿ/,
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

# Rural Water Supply and Sanitation Division Bengaluru Urban District

| Taluk | G.P | Habitations | HABITATION SUPPLIED WITH DRINKING WATER THROUGH TANKERS | | | | | | | | | | | | Remark. |
|---|---|---|---|---|---|---|---|---|---|---|---|---|---|---|---|
| | | | No.of villages | | | No.of Tankers | | | No.of Trip per day | | | No.of Private Borewells hired | | | |
| | | | As per EE's Report | Revenue | Difference | As per EE's Report | Revenue | Difference | As per EE's Report | Revenue | Difference | As per EE's Report | Revenue | Difference | |
| Anekal | Vanakana halli | ಕಾಳನಾಯಕನಹಳ್ಳಿ | 1 | 1 | - | 1 | 1 | - | 2 | 2 | - | - | - | - | |
| | | ವಣಕನಹಳ್ಳಿ | 1 | 1 | - | 2 | 2 | - | 2 | 2 | - | - | - | - | |
| | | ತೆಲಗರಹಳ್ಳಿ | 1 | 1 | - | 1 | 1 | - | 1 | 1 | - | - | - | - | |
| | | ಸುಣವಾರ | 1 | 1 | - | 2 | 2 | - | 6 | 6 | - | - | - | - | |
| | Samandur | ಗೆರಟಿನಗಬೆಲೆ | 1 | 1 | - | 1 | 1 | - | 1 | 1 | - | - | - | - | |
| | Shanti-pura | ರಾಯಸಂದ್ರ | 1 | 1 | - | 1 | 1 | - | 3 | 3 | - | - | - | - | |
| | Indlawadi | ಇಂಡ್ಲವಾಡಿಪುರ | 1 | 1 | - | 1 | 1 | - | 4 | 4 | - | - | - | - | |
| | | ನಲ್ಲಯ್ಯನದೊಡ್ಡಿ | 1 | 1 | - | 2 | 2 | - | 5 | 5 | - | - | - | - | |
| | | ಇಂಡ್ಲವಾಡಿ | 1 | 1 | - | 4 | 4 | - | 13 | 13 | - | - | - | - | |
| | | ಬಗ್ಗನದೊಡ್ಡಿ | 1 | 1 | - | 2 | 2 | - | 15 | 15 | - | - | - | - | |
| | | ತಿಮ್ಮಸಂದ್ರ | 1 | 1 | - | 1 | 1 | - | 4 | 4 | - | - | - | - | |
| | | Total | 11 | 11 | - | 18 | 18 | - | 56 | 56 | - | - | - | - | |

Executive Engineer
Rural Drinking Water and Sanitation Division
Bengaluru Urban District

5. It is the submission of the Deputy Commissioner that except some areas in Anekal Taluk, the areas falling within the Bengaluru Municipal Corporation limits and also 110 villages which are now under Bruhat Bengaluru Mahanagara Palike (herein after referred to as **'BBMP'** in short) jurisdiction, does not fall within his jurisdiction so far as water supply is concerned and he has nothing to say in that behalf. So far as Anekal area is concerned, it is his submission that the details are set out in the statement filed along with the report. He further pointed out that the drinking water is being supplied through water tankers.

6. On behalf of BWSSB, a status report dated 23-04-2019 has been filed, which reads as follows:

-17- LOK/BCD-946/2019.

Email id: elc@bwssb.gov.in

Phone :22945105

Fax: 08022945105

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009

**ಸಂ.ಬೆಂ.ಜ.ಮಂ./ಪ್ರಮು.ಅ/ಮುಅ(ನಿ)/ಅಮುಅ(ನಿ)-3/ಉಮುಅ(ನಿ)-2/ತಾಸ(ನಿ)-2/ /2018-19 ದಿನಾಂಕ: 23-04-2019**

ಗೆ,

ಮಾನ್ಯ ಅಪರ ನಿಬಂಧಕರು ವಿಚಾರಣೆಗಳು-1
ಕರ್ನಾಟಕ ಲೋಕಾಯುಕ್ತ
ಬೆಂಗಳೂರು.

ಮಾನ್ಯರೇ,

ವಿಷಯ: ದಿನಪತ್ರಿಕೆಯಲ್ಲಿ ಪ್ರಕಟಗೊಂಡ ವಿಷಯದನ್ವಯ ನಮ್ಮ ಸಂಸ್ಥೆಯಲ್ಲಿ ದಾಖಲಾಗಿರುವ ಸ್ವಯಂಪ್ರೇರಿತ ದೂರಿನ ಕುರಿತು.

ಉಲ್ಲೇಖ: 1.ತಮ್ಮ ನೋಟೀಸು ಸಂಖ್ಯೆ: ಕಂ.ಲೋಕ್.ಬಿಸಿಡಿ964/2019 ದಿ:30.03.19.
2.ದಿನಾಂಕ: 10-03-2019 ಭಾನುವಾರ ಪ್ರಜಾವಾಣಿ ದಿನ ಪತ್ರಿಕೆ ವರದಿ.
3.ದಿನಾಂಕ:11-03-2019 ಸೋಮವಾರ ಪ್ರಜಾವಾಣಿ ಪತ್ರಿಕೆ ವರದಿ.
4.ಗೌರವಾನ್ವಿತ ಲೋಕಾಯುಕ್ತರ ಆದೇಶ ದಿನಾಂಕ:27-03-2019.

******

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮ ಘನ ಸನ್ನಿದಾನದಲ್ಲಿ ಈ ಮೂಲಕ ಅರಿಕೆ ಮಾಡಿಕೊಳ್ಳವುದೇನೆಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಬೊಮ್ಮನಹಳ್ಳಿ ಹಾಗೂ ಬೆಳ್ಳಂದೂರು ಪ್ರದೇಶಗಳಲ್ಲಿ ಬೇಸಿಗೆಯಿಂದ ನೀರಿನ ಹಾಹಾಕಾರ ಉಂಟಾಗಿದೆ ಎಂದು ಉಲ್ಲೇಖ (2) ಹಾಗೂ (3) ರ ದಿನ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಗೊಂಡ ಹಿನ್ನೆಲೆಯಲ್ಲಿ ಗೌರವಾನ್ವಿತ ಲೋಕಾಯುಕ್ತರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ದಿ:27.03.2019 ರಲ್ಲಿ ಆದೇಶ ನೀಡಿದ್ದು, ಈ ಬಗ್ಗೆ ಆದೇಶದಲ್ಲಿ ಸೂಚಿಸಿರುವ ಮಾಹಿತಿಗಳೊಂದಿಗೆ ವಿಚಾರಣೆಗೆ ಹಾಜರಾಗುವಂತೆ ತಾವು ಉಲ್ಲೇಖ (1) ರಲ್ಲಿ ಸೂಚಿಸಿದ್ದು, ಅದರಂತೆ ಗೌರವಾನ್ವಿತ ಲೋಕಾಯುಕ್ತರು ತಮ್ಮ ಆದೇಶದಲ್ಲಿ

Lok/BCD-946/19. -15-

ಸೂಚಿಸಿರುವ ಮಾಹಿತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಘನ ಸನ್ನಿಧಾನಕ್ಕೆ ಸಲ್ಲಿಸುತ್ತಾ ಸದರಿ ಪ್ರಕರಣದಿಂದ ಬೆಂಗಳೂರು ಜಲಮಂಡಳಿಯನ್ನು ಕೈಬಿಡಬೇಕೆಂದು ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಹಿ/-
**ಮುಖ್ಯ ಅಭಿಯಂತರರು (ನಿರ್ವಹಣೆ)**
**ಬೆಂಗಳೂರು ಜಲಮಂಡಳಿ.**

**ದಿ:10.03.2019 ಹಾಗೂ ದಿ:11.03.2019 ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ವಿಷಯದ ಅನ್ವಯ ಗೌರವಾನ್ವಿತ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ಸ್ವಯಂಪ್ರೇರಿತ ದೂರಿನ (ನಂ.ಕಂ.ಲೋಕ್.ಬಿಸಿಡಿ/946/2019) ಕುರಿತು ವಾಸ್ತವಾಂಶದ ವರದಿ**

- ಕರ್ನಾಟಕ ಸರ್ಕಾರವು ತನ್ನ ಆದೇಶದ ಸಂಖ್ಯೆ UDD 92 MNI 2006, Dt: 16.01.2007 ರಲ್ಲಿ 7 ನಗರ ಸಭೆ ಮತ್ತು 01 ಪುರಸಭೆ ಪ್ರದೇಶಗಳು ಹಾಗೂ 110 ಹಳ್ಳಿಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ ವಿಲೀನಗೊಳಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ರಚಿಸಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸೇರಿರುವ 110 ಹಳ್ಳಿಗಳನ್ನೊಳಗೊಂಡ ಪ್ರದೇಶವು 225 ಚ.ಕಿ.ಮೀ ಪ್ರದೇಶದ ವ್ಯಾಪ್ತಿಯನ್ನು ಹೊಂದಿದ್ದು, ಈ ಪ್ರದೇಶಗಳಿಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ 800 ಚ.ಕಿ.ಮೀ ಪ್ರದೇಶದ ಪೈಕಿ ಹಳೆಯ ಬೆಂಗಳೂರು ನಗರ – 245 ಚ.ಕಿ.ಮೀ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿಲೀನಗೊಂಡ 7 ನಗರಸಭೆ ಹಾಗೂ 1 ಪುರಸಭೆ ಪ್ರದೇಶ 330ಚ.ಕಿ.ಮೀ ಮತ್ತು 110 ಹಳ್ಳಿಗಳ ಪ್ರದೇಶ – 225ಚ.ಕಿ.ಮೀ ಆಗಿರುತ್ತದೆ. ಸದರಿ ಪ್ರದೇಶಗಳ ಪೈಕಿ, ಪ್ರಸ್ತುತ ಬೆಂಗಳೂರು ಜಲಮಂಡಳಿಯು 575 ಚ.ಕಿ.ಮೀ ವ್ಯಾಪ್ತಿಯ ಹಳೆಯ ಬೆಂಗಳೂರು ನಗರ ಮತ್ತು 7 ನಗರಸಭೆ ಹಾಗೂ 1 ಪುರಸಭೆ ಪ್ರದೇಶಕ್ಕೆ ಮಾತ್ರ ನೀರು ಸರಬರಾಜು ಮಾಡುವ ಮತ್ತು ಒಳಚರಂಡಿ ಸೌಲಭ್ಯಗಳನ್ನು ನೀಡುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ.
- 2012 ರಲ್ಲಿ ಕಾವೇರಿ ನೀರು ಸರಬರಾಜು ಯೋಜನೆಯ 4ನೇ ಹಂತ 2ನೇ ಘಟ್ಟ ಚಾಲನೆಗೊಂಡ ನಂತರ ಬೆಂಗಳೂರು ನಗರಕ್ಕೆ ಸರಬರಾಜಾಗುತ್ತಿದ್ದ ನೀರಿನ ಪ್ರಮಾಣವನ್ನು 900 ದಶಲಕ್ಷ ಲೀಟರ್ ನಿಂದ 1400 ದಶಲಕ್ಷ ಲೀಟರ್‌ಗೆ ಹೆಚ್ಚಿಸಲಾಗಿದ್ದು, ಮಾರ್ಚ್–2019 ಮಾಹೆಯ ಅಂತ್ಯಕ್ಕೆ ಬೆಂಗಳೂರು ಜಲಮಂಡಳಿಯಿಂದ 9.70 ಲಕ್ಷ ಸಂಪರ್ಕಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳಿಗೆ ರೂ.1500 ಕೋಟಿ ಅಂದಾಜು ವೆಚ್ಚದಲ್ಲಿ ಕುಡಿಯುವ ನೀರನ್ನು ಒದಗಿಸಲು ಜಲಮಂಡಳಿಯು ಕಾಮಗಾರಿಯನ್ನು ಕೈಗೊಂಡಿದ್ದು, ಕರ್ನಾಟಕ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು, ಕಾಮಗಾರಿಯನ್ನು ಬ್ಯಾಟರಾಯನಪುರ, ಮಹದೇವಪುರ, ಬೊಮ್ಮನಹಳ್ಳಿ,

ಆರ್.ಆರ್.ನಗರ ಮತ್ತು ದಾಸರಹಳ್ಳಿ ಎಂದು 5 ವಲಯಗಳಾಗಿ ವಿಂಗಡಿಸಿ, ಟೆಂಡರ್ ಪ್ರಕ್ರಿಯೆಯ ಮೂಲಕ ಮೇ–2017 ರಲ್ಲಿ ಕಾರ್ಯಾದೇಶ ನೀಡಲಾಗಿದ್ದು, ಸದರಿ ಕಾಮಗಾರಿಗಳು ಪ್ರಗತಿಯಲ್ಲಿದ್ದು 24 ತಿಂಗಳುಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಡಿಯಲ್ಲಿ ಒಟ್ಟು 2721 ಕಿಮೀ (100ಎಂಎಂ ವ್ಯಾಸದಿಂದ 1422 ಎಂಎಂ ವ್ಯಾಸದ) ಕುಡಿಯುವ ನೀರಿನ ಕೊಳವೆಗಳನ್ನು ಅಳವಡಿಸಬೇಕಾಗಿದ್ದು ಒಟ್ಟಾರೆಯಾಗಿ ಮಾರ್ಚ್–2019ರ ಅಂತ್ಯಕ್ಕೆ 2350 ಕಿಮೀನಷ್ಟು ಭೌತಿಕ ಪ್ರಗತಿಯಾಗಿರುತ್ತದೆ. 110 ಹಳ್ಳಿಗಳ ವ್ಯಾಪ್ತಿಯಲ್ಲಿ ಒಟ್ಟು 11 ಎತ್ತರ ಮಟ್ಟದ ಜಲಾಗಾರ ಹಾಗೂ ಗೊಟ್ಟಿಗೆರೆಯಲ್ಲಿ 50 ಎಂ.ಎಲ್ ಸಾಮರ್ಥ್ಯದ ನೆಲಮಟ್ಟದ ಜಲಾಗಾರ ನಿರ್ಮಿಸುವ ಕಾಮಗಾರಿಯು ಪ್ರಗತಿಯಲ್ಲಿದೆ.

- ಸದರಿ ಯೋಜನೆಯಡಿಯಲ್ಲಿ ಬೊಮ್ಮನಹಳ್ಳಿ (33 ಹಳ್ಳಿಗಳು) ವಲಯಕ್ಕೆ ಸಂಬಂಧಿಸಿದಂತೆ, ಒಟ್ಟು 770 ಕಿ.ಮೀ.ನಷ್ಟು ಕುಡಿಯುವ ನೀರಿನ ಕೊಳವೆಗಳನ್ನು ಅಳವಡಿಸಬೇಕಾಗಿದ್ದು, ಇಲ್ಲಿಯವರೆಗೂ 721 ಕಿ.ಮೀ.ನಷ್ಟು ಕುಡಿಯುವ ನೀರಿನ ಕೊಳವೆಗಳನ್ನು ಅಳವಡಿಸಲಾಗಿರುತ್ತದೆ. ಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಬರುವ ಒಟ್ಟು 03 ಎತ್ತರ ಮಟ್ಟದ ಜಲಾಗಾರ ಹಾಗೂ ಗೊಟ್ಟಿಗೆರೆಯಲ್ಲಿ 50 ಎಂ.ಎಲ್ ಸಾಮರ್ಥ್ಯದ ನೆಲಮಟ್ಟದ ಜಲಾಗಾರ ನಿರ್ಮಿಸುವ ಕಾಮಗಾರಿಯು ಪ್ರಗತಿಯಲ್ಲಿದೆ
- ಮುಂದುವರೆದು, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಜಸಂಇ 60 ಎಂಎಂಕೆ 2013, ಬೆಂಗಳೂರು, ದಿನಾಂಕ:20.04.2016 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾದ 110 ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಹೆಚ್ಚುವರಿಯಾಗಿ 10 ಟಿಎಂಸಿ ನೀರನ್ನು ಹಂಚಿಕೆ ಮಾಡಲಾಗಿರುತ್ತದೆ. ಸದರಿ ಯೋಜನೆಯನ್ನು ಬೆಂಗಳೂರು ಜಲಮಂಡಲಿಯು ರೂ.5550 ಕೋಟಿ ಜೈಕಾ ಆರ್ಥಿಕ ನೆರವಿನಿಂದ ಕಾವೇರಿ 5ನೇ ಹಂತದ ಯೋಜನೆಯಲ್ಲಿ ಅನುಷ್ಠಾನಗೊಳಿಸಿತ್ತಿದ್ದು, ಈಗಾಗಲೇ ಎಲ್ಲಾ ಹಂತದಲ್ಲಿ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು, ಈ ಯೋಜನೆಯನ್ನು 2023 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 110 ಹಳ್ಳಿಗಳಿಗೆ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸುವ ಸಲುವಾಗಿ ಗೊಟ್ಟಿಗೆರೆಯಲ್ಲಿ 50 ಎಂ.ಎಲ್ ಸಾಮರ್ಥ್ಯದ ನೆಲಮಟ್ಟದ ಜಲಾಗಾರ ಮತ್ತು ವಿವಿಧ ಪ್ರದೇಶಗಳಲ್ಲಿ ಒಟ್ಟು 11 ಸಂಖ್ಯೆಯ ಎತ್ತರ ಮಟ್ಟದ ಜಲಾಗಾರಗಳನ್ನು ನಿರ್ಮಿಸಲಾಗುತ್ತಿದೆ, ಇದರೊಂದಿಗೆ ಕಾವೇರಿ 5ನೇ ಹಂತದ ಯೋಜನೆ ಪೂರ್ಣಗೊಂಡ ನಂತರ ಸದರಿ ಪ್ರದೇಶಗಳಿಗೆ ಸಮರ್ಪಕವಾಗಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದು.
- ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರಿನ ಅವಶ್ಯಕತೆಯನ್ನು ಪೂರೈಸಲು ಎತ್ತಿನಹೊಳೆ ಯೋಜನೆಯಿಂದ 2.50 ಟಿ.ಎಂ.ಸಿ. ಯಷ್ಟು ನೀರನ್ನು ಪಡೆಯಲು ಯೋಜನೆ ರೂಪಿಸಲಾಗಿದ್ದು ಈ ಬಗ್ಗೆ ಸರ್ಕಾರವು ಅನುಮೋದನೆ ನೀಡಿದ್ದು. ನೀರಿನ ಶೇಖರಣೆಗಾಗಿ ತಿಪ್ಪಗೊಂಡನಹಳ್ಳಿಯ ಜಲಾಶಯದ ಪುನಶ್ಚೇತನ ಕಾಮಗಾರಿಯನ್ನು ಮಂಡಳಿ ವತಿಯಿಂದ ಕೈಗೊಂಡಿದ್ದು ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆಸಿ ರೂ.292 ಕೋಟಿಗಳಿಗೆ ಕಾರ್ಯದೇಶ ನೀಡಲಾಗಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
- ಬೆಂಗಳೂರು ಜಲಮಂಡಳಿಯು ಪ್ರಸ್ತುತ 68 ನೀರಿನ ಟ್ಯಾಂಕರ್‌ಗಳನ್ನು ಹೊಂದಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹಳೆಯ ಬೆಂಗಳೂರು ಹಾಗೂ 7 ನಗರ ಸಭೆ ಮತ್ತು 1 ಪುರಸಭೆ ವ್ಯಾಪ್ತಿಯಲ್ಲಿ ಅವಶ್ಯಕತೆ ಇರುವ ಕಡೆಯಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ.
- ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಬಹುತೇಕ ಪ್ರದೇಶಗಳು 110 ಹಳ್ಳಿಗಳ ವ್ಯಾಪ್ತಿಗೆ ಒಳಪಟ್ಟಿದ್ದು, ಈ ಪ್ರದೇಶಗಳಿಗೆ ಮೇಲೆ ತಿಳಿಸಿರುವ ಕಾಮಗಾರಿಗಳು ಪೂರ್ಣಗೊಂಡ ನಂತರ ಸಮರ್ಪಕವಾಗಿ ನೀರು

Lok/BCD-946/2019 -17-

ಸರಬರಾಜು ಮಾಡಲಾಗುವುದೆಂದು ತಮ್ಮ ಆದ್ಯ ಗಮನಕ್ಕೆ ತರುತ್ತಾ ಸದರಿ ಪ್ರಕರಣದಿಂದ ಬೆಂಗಳೂರು ಜಲಮಂಡಳಿಯನ್ನು ಕೈಬಿಡಲು ಕೋರಲಾಗಿದೆ.

- ಮೇಲ್ಕಂಡ ವಾಸ್ತವಿಕ ಅಂಶಗಳ ಜೊತೆಗೆ ಗೌರವಾನ್ವಿತ ಲೋಕಾಯುಕ್ತರು ದಿ:27.03.2019 ರ ತಮ್ಮ ಆದೇಶದಲ್ಲಿ ಕೋರಿರುವ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ (1) ರಲ್ಲಿ ನಮೂದಿಸಲಾಗಿದೆ.

**ಸಹಿ/-**
**ಮುಖ್ಯ ಅಭಿಯಂತರರು (ನಿರ್ವಹಣೆ)**
**ಬೆಂಗಳೂರು ಜಲಮಂಡಳಿ**

## ಅನುಬಂಧ-1

**ಗೌರವಾನ್ವಿತ ಲೋಕಾಯುಕ್ತರು ದಿನಾಂಕ:27-03-2019 ರ ಆದೇಶದಲ್ಲಿ ಕೋರಿರುವ ಮಾಹಿತಿ ಬಗ್ಗೆ**

**ಅಂಕಿ-ಅಂಶಗಳು**

| ಕ್ರ ಸಂ. | ಕೋರಿರುವ ಮಾಹಿತಿ | ವಿವರಗಳು |
|---|---|---|
| 1 | Budgetary allotment made for supply of drinking water to various parts of Bengaluru, with reference to each area. | ಜಲಮಂಡಳಿಯು ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ತನ್ನ ಆಯವ್ಯಯದಲ್ಲಿ ಯಾವುದೇ ಹಣ ನಿಗಧಿಪಡಿಸಿರುವುದಿಲ್ಲ.<br>ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ನಿರ್ವಹಣೆಗಾಗಿ 2018-19 ಹಾಗೂ 2019-20 ರ ಆಯವ್ಯಯದಲ್ಲಿ ಈ ಕೆಳಕಂಡಂತೆ ಅನುದಾನ ನಿಗದಿಪಡಿಸಲಾಗಿದೆ.<br>ಸದರಿ ಮೊತ್ತದಲ್ಲಿ ನಿರ್ವಹಣೆಗಾಗಿ ನಿಯೋಜಿತರಾಗಿರುವ ಸಿಬ್ಬಂದಿ ವೆಚ್ಚಗಳು,ವಿದ್ಯುತ್ ವೆಚ್ಚ, ಸಾಲ ಮರುಪಾವತಿ ವೆಚ್ಚಗಳು ಸೇರಿರುತ್ತವೆ.<br>ಸಾಲು / ಬೆಂಗಳೂರು ಜಲಮಂಡಳಿಯ ಆಯವ್ಯಯದಲ್ಲಿ ಹಂಚಿಕೆಯಾದ ಮೊತ್ತ (ರೂ.ಕೋಟಿಗಳಲ್ಲಿ)<br>2018-19 / 2247.60<br>2019-20 / 2553.51 |
| 2 | The money collected from the public for supply of drinking water and the facilities provided so far, with reference to each area. | 2018-19 ರಲ್ಲಿ ಏಪ್ರಿಲ್-2018 ರ ಮಾಹೆಯಿಂದ ಮಾರ್ಚ್-2019 ರ ವರೆಗೆ ಸಾರ್ವಜನಿಕರಿಂದ ಒಟ್ಟು ರೂ.1294.37 ಕೋಟಿಗಳಷ್ಟು ನೀರಿನ ಮತ್ತು ಒಳಚರಂಡಿ ಶುಲ್ಕವನ್ನು ಸಾರ್ವಜನಿಕರಿಂದ ಸಂಗ್ರಹಿಸಲಾಗಿದೆ. |
| 3 | The details of vehicles hired for supply of drinking water with details of amount spent for such hiring, with reference to each area. | ಬೆಂಗಳೂರು ಜಲಮಂಡಳಿಯು ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲು ಯಾವುದೇ ಗುತ್ತಿಗೆದಾರರನ್ನು ನೇಮಿಸಿಕೊಂಡಿರುವುದಿಲ್ಲ, ತನ್ನ ಸ್ವಂತ ಟ್ಯಾಂಕರ್‌ಗಳಲ್ಲಿ ಅವಶ್ಯಕತೆ ಇರುವ ಕಡೆ ನೀರು ಸರಬರಾಜು ಮಾಡುತ್ತಿದೆ. ಈ ಸಂಬಂಧ ಮಂಡಳಿಯು ಯಾವುದೇ ವೆಚ್ಚ ಗುತ್ತಿಗೆದಾರರಿಗೆ ಪಾವತಿಸಿರುವುದಿಲ್ಲ. |
| 4 | Details of water supplied for each month in each area | ಮಂಡಳಿಯ ಪ್ರಧಾನ ಅಭಿಯಂತರರ ಸುತ್ತೋಲೆ ಸಂಖ್ಯೆ:ಬೆಂ.ಜ.ಮಂ/ಇಐಸಿ/ಸಿಇ(ಎಮ್)/9344/2018-19 ದಿ:19.03.19 ರಲ್ಲಿ ಬೆಂಗಳೂರು ಮಹಾನಗರದ ವಿವಿಧ ಪ್ರದೇಶಗಳಿಗೆ ವಿತರಣೆಗಾಗಿ ಹಂಚಿಕೆ ಮಾಡಲಾದ ನೀರಿನ ಪ್ರಮಾಣವನ್ನು ನಿಗಧಿಪಡಿಸಿದ್ದು ಅದರಂತೆ ವಿತರಣೆ ಮಾಡಲಾಗುತ್ತಿದೆ. (ಪ್ರತಿ ಲಗತ್ತಿಸಲಾಗಿದೆ) |

| | | |
|---|---|---|
| 5 | Details of the contractors employed by BWSSB/BBMP for supply of water in each area. | ಬೆಂಗಳೂರು ಜಲಮಂಡಳಿಯು ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲು ಯಾವುದೇ ಗುತ್ತಿಗೆದಾರರನ್ನು ನೇಮಿಸಿಕೊಂಡಿರುವುದಿಲ್ಲ. |
| 6 | All other relevant information required for effective and punctual distribution of water by BWSSB/BBMP for the public. | ದಿ:16.01.2007 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಗೊಂಡ ನಂತರ ಅದಕ್ಕೆ ವಿಲೀನಗೊಂಡ 7 ನಗರಸಭೆ, 1 ಪುರಸಭೆ ಹಾಗೂ 110 ಹಳ್ಳಿಗಳಿಗೆ ಕುಡಿಯುವ ನೀರು ವ್ಯವಸ್ಥೆ ನಿರ್ವಹಣೆಗೆ ಸಂಬಂಧಪಟ್ಟಂತೆ ಜಲಮಂಡಳಿಯು ಹೊಂದಿರುವ ಜವಾಬ್ದಾರಿ ಹಾಗೂ ಕೈಗೊಂಡ ಕ್ರಮದ ವಿವರಗಳನ್ನು ವಾಸ್ತವಾಂಶದ ವರದಿಯಲ್ಲಿ ತಿಳಿಸಲಾಗಿರುತ್ತದೆ. |

ಸಹಿ/-
ಮುಖ್ಯ ಅಭಿಯಂತರರು (ನಿರ್ವಹಣೆ),
ಬೆಂಗಳೂರು ಜಲಮಂಡಳಿ".

In the status report submitted, the details of the water supplies made by the BWSSB has been set out.

7. Sri. Gangadhar, Chief Engineer, BWSSB submitted that BWSSB is not in charge of supply of water in respect of 110 villages which has been now brought under the limits of Corporation/Palike. According him, the water supply to 110 villages is required to be made and is being made by the BBMP. He submits that BBMP has to answer the grievance of the public who are residing within the area of 110 villages.

8. The copy of the reports submitted by the BWSSB dated 23-04-2019 and the Deputy Commissioner,

Bengaluru Urban District dated 24-04-2019 may be communicated to the Commissioner, BBMP.

9. It is unfortunate that though the notice has been issued to the Commissioner, BBMP, no one is present to represent the BBMP today though the subject matter relates to the steps to be taken for regular supply of water to the residents of the Bengaluru City. Under these circumstances, I am of the view, that it would be in the interest of justice to give one more opportunity to the Commissioner, BBMP. Accordingly, the Commissioner, BBMP is directed to file detailed status report with regard to the steps taken for supply of water in respect of 110 villages, which are brought within the jurisdiction of BBMP by the next date of hearing. On the next date of hearing, the Commissioner, BBMP or his authorized officer, who is able to assist me, is directed to be present with the status report and also with the explanation for the absence for appearance today.

10. The presence of Deputy Commissioner, Bengaluru Urban District on the next date of hearing is dispensed with.

11. The ARE-1 to go through the status report to be submitted and submit his scrutiny note.

12. Communicate this order to the parties.

List this case on **14-05-2019 at 11-30 a.m.**

25/4/2019

**(Justice P. Vishwanatha Shetty),**
Lokayukta,
Karnataka State.

**AS***

3) 14/05/2019. ARE-1.

ಗೌ. ಲೋಕಾಯುಕ್ತರು-
-ರವರ ಆದೇಶದಂತೆ
ಜಿಲ್ಲಾಧಿಕಾರಿಗಳು &
ಮುಖ್ಯ ಅಭಿಯಂತರರು,
BWSSB ರವರಿಗೆ ನೋಟಿಸ್
ಜಾರಿ ಮಾಡಿದ್ದು, E-mail
ಕಳುಹಿಸಲಾಗಿರುತ್ತದೆ.
ಆಯುಕ್ತರು, ಬಿಬಿಎಂಪಿ
ಮತ್ತು ಮುಖ್ಯ ಅಭಿಯಂತರರು-
-ರವರಿಂದ ವರದಿ ಬಂದಿರು-
-ವುದಿಲ್ಲ. ಮಾನ್ಯರ ಮುಂದಿನ
ಆದೇಶಕ್ಕಾಗಿ ಮಂಡಿಸಿದೆ.

# KARNATAKA LOKAYUKTA, BENGALURU

No.Compt/LOK/BCD-946/2019/ARE-1 Date : 14.05.2019

## O R D E R

Sri M.R.Venkatesh, Engineer-in-Chief of BBMP, Bengaluru is present along with Sri Sidde Gowda, Chief Engineer, Bommanahalli Zone, Sri B.S.Prasad, Chief Engineer, East Zone, Sri Vijaya Kumar.N, Chief Engineer, Dasarahalli Zone, Sri S.D.Nagaraj, Chief Engineer, Rajarajeshwari Nagar Zone, Sri Parameshwaraiah, Chief Engineer of Yelahanka and Mahadevapura Zone, BBMP, Bengaluru are present. On behalf of BWSSB Sri Gangadhar, Chief Engineer, BWSSB is present.

2) All the Chief Engineers, except Sri S.D.Nagaraj, Chief Engineer of Rajarajeshwari Nagar, have filed their Status Reports as directed by me earlier. Sri S.D.Nagaraj, Chief Engineer of Rajarajeshwari Nagar, BBMP, Bengaluru prays for three weeks' time to file the Status Report. He submits that, since he has taken over charge very recently, he was not able

to file the Status Report. In the light of the request made, he is given three weeks' time to file the Status Report.

3) In the course of the discussion, several issues were discussed by me with Sri M.R.Venkatesh, Engineer-inChief, BBMP, Bengaluru and other Chief Engineers present. All of them submitted that effective steps are being taken by all the concerned to supply water to the members of the public within their zones. They submitted that the tankers are being maintained by the BBMP and water is being supplied without causing any inconvenience to the members of the public. It is also submitted by them, that to ensure that the water is being supplied properly and to avoid any mal-administration, all the water tankers are fixed with the GPS which reflects the movement of the water tankers. It is also their submission that the distribution of water is being maintained and reviewed by the concerned Assistant Executive Engineers and Assistant Engineers of the respective wards. It is also brought to my notice by them that every month Zonal Co-ordination meeting is being held and for each zone, one IAS officer has been appointed as Nodal Officer by the Government and in his

presence all the concerned officers meeting is held and various problems touching public interest regarding supply of water, cleaning of garbage, health issues, street lights, major roads, storm water drain etc., are being discussed and effective directions are being given to the concerned officers of the BBMP to execute the work. They also submitted that once in every fortnight a meeting is also convened by the Chief Secretary of the State of all the Nodal Officers of the Government and in his presence several issues concerning the BBMP is being discussed and appropriate decision are being taken.

4) While I appreciate that effective steps are being taken to improve the administration in BBMP by taking all the officers into confidence by the Chief Secretary and the other Secretaries of the State, who are appointed as Nodal Officers and the Senior Officers of the BBMP, it is needless to point out that still several steps are required to be taken and it is a continuous process. The grievance of the members of the public made before me both orally and in the form of a complaint is enormous. The authorities/officers of the BBMP

who are entrusted with various works, it is needless to point out that they are required to attend to those works without any loss of time and keeping in mind the public interest and with the total commitment to redress the grievances of the members of the public. One of the important works that requires little urgency and required to be executed expeditiously is laying of the underground drainage system in 110 villages.

5) Sri Gangadhar, Chief Engineer, BWSSB, Bengaluru submitted that as per the project report the underground drainage system is expected to be completed by 2021. He further submitted that one Sri Shiva Prasad, Chief Engineer (Projects), BWSSB, Bengaluru is incharge of the said work. In the light of the said submission made, **issue notice to Sri Shiva Prasad, who is in charge of Chief Engineer (Projects), BWSSB, Bengaluru.** No doubt, the BWSSB officer, who is in charge of the work, is the authority to decide the exact time that may be required to complete the work. However, it is needless to point out that in view of the greater public interest, the said work is required to be completed at an earliest point of time, I am sure, the concerned will apply their

mind to this suggestion made and see that the underground drainage is completed as early as possible.

6) Sri Gangadhar, Chief Engineer, BWSSB, Bengaluru is given six weeks time to file the detailed Status Report with regard to the steps taken with zone wise details, the details of the work entrusted to the contractors etc., to lay the underground drainage and also showing the progress of work in all the 110 villages in the Status Report to be filed.

7) Sri Sidde Gowda, Chief Engineer, Bommanahalli Zone submitted that the BWSSB has already laid the water supply pipe line in respect of 447 kms, covering Bommanahalli zone. According to him, the only work remains to be executed by BWSSB is to give connection to the individual houses and supply drinking water. Since Sri Shiva Prasad, Chief Engineer (Projects), BWSSB who is in charge of the said work is not present today, six weeks time is given to Sri Shivaprasad and Sri Gangadhar, Chief Engineers to file the Status Report with regard to the steps they are required to take for giving water connection to individual houses where ever the water supply line is already completed. Hence, for the said purpose, Sri

Shiva Prasad and Sri Gangadhar, Chief Engineers, BWSSB are directed to be present with the Status Report on **3.7.2019 at 3.00 p.m**.

8) Communicate this order to the parties concerned. All other officers referred to above are given three months time to file the Status Report. **Sri Gangadhar, Chief Engineer and Sri Shiva Prasad, Chief Engineer (Projects), BWSSB, Bengaluru are only required to be present on 3rd July, 2019 at 3.00 p.m. along with their Status Report.** The presence of other officers are dispensed with on the next date of hearing.

List this case on **3rd July, 2019 at 3.00 p.m.**

(Justice P.Vishwanatha Shetty) 14/5/2019
Lokayukta
State of Karnataka

*vl

9) Additional Registrar of Enq.1

ARE-1.

4) 03\07\2019.
ಸಾ, ಲೋಕಾಯುಕ್ತ-
-ರವರ ಆದೇಶದಂತೆ
ಮುಖ್ಯ ಅಭಿಯಂತರರು.
-ರವರಿಗೆ ನೋಟಿಸ್ ಜಾರಿ
ಮಾಡಿದ್ದು, ಸ್ವೀಕೃತಿ ಬಂದಿದೆ.
ಮುಖ್ಯ ಅಭಿಯಂತರರು,
RR ನಗರ ವಲಯರವರ
ಅನುಪಾಲನಾ ವರದಿ ದಿ: 31/05/2019
ಬಂದಿರುತ್ತದೆ.

ಮುಖ್ಯ ಅಭಿಯಂತರರು,
ಬೆಂಗಳೂರು ಜಲಮಂಡಳಿ
-ರವರ ಅನುಪಾಲನಾ ವರದಿ
ದಿ: 01/07/2019 ಬಂದಿರುತ್ತದೆ.

ಮುಖ್ಯ ಅಭಿಯಂತರರು - ಬೊಮ್ಮನಹಳ್ಳಿ
ವಲಯ, ದಾಸರಹಳ್ಳಿ ವಲಯ,
ಪೂರ್ವ ವಲಯ, ಯಲಹಂಕ & ಮಹ-
-ದೇವಪುರ ವಲಯ ರವರಿಂದ
ಅನುಪಾಲನಾ ವರದಿ ಬಂದಿರುತ್ತಿದ್ದು.
ಮಾನ್ಯರ ಮುಂದಿನ ಆದೇಶಕ್ಕಾಗಿ
ಮಂಡಿಸಿದೆ.

[signature]

# KARNATAKA LOKAYUKTA : BENGALURU

No: Compt/Lok/BCD-946/2019/ARE-1 Date: 03-07-2019

## ORDER

Sri. B.Shivaprasad, Chief Engineer (Project) and Sri. B.C.Gangadhar, Chief Engineer (Maintenance), along with Sri. B.K.Pradeep, Executive Engineer, Bommanahalli (Maintenance & Project-15) of Bengaluru Water Supply and Sewerage Board, Bengaluru (herein after referred to as **'BWSSB'** for short), are present.

2. A status report dated 01-07-2019 has been filed by Sri. B.Shivaprasad. It is useful to extract the same, which reads as here under:

**"ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ**

ಮುಖ್ಯ ಅಭಿಯಂತರರು(ಯೋಜನೆ) ರವರ ಕಛೇರಿ, 3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು–560 009

ಸಂ:ಬೆಂಜಮಂ/ಮು.ಅ(ಯೋ)/ಅಮುಅ(ನಿ&ಯೋ)/ 376/2019-20 ದಿನಾಂಕ: 01. .07.2019

ಇವರಿಗೆ,

ಅಪರ ನಿಭಂದಕರು ವಿಚಾರಣೆ–1,
ಕರ್ನಾಟಕ ಲೋಕಾಯುಕ್ತ,
ಬಹು ಮಹಡಿ ಕಟ್ಟಡ
ಬೆಂಗಳೂರು.

ಮಾನ್ಯರೆ,

ವಿಷಯ: ಬಿಬಿಎಂಪಿಯ 110 ಹಳ್ಳಿಗಳಲ್ಲಿ ನೀರಿನ ಕೊರತೆಯ Suo-moto ಪ್ರಕರಣಕ್ಕೆ ಅನುಸರಣೆ – ಡೈಲಿಯಲ್ಲಿ ಪ್ರಕಟವಾದ ಪ್ರಕರಣಕ್ಕೆ ಸಂಬಂಧಿಸಿದಂತೆ.

ಉಲ್ಲೇಖ: No.Com/LOK/BCD-946/2019/ARE-1 Dt: 14.05.2019

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬಿಬಿಎಂಪಿಯ 110 ಹಳ್ಳಿಗಳಲ್ಲಿ ನೀರು ಸರಬರಾಜು ಸಂಪರ್ಕ ಮತ್ತು ಫೀಡರ್ / ಸಬ್ ಫೀಡರ್ ಕಲ್ಪಿಸುವ ಸಲುವಾಗಿ ಮಹದೇವಪುರ, ಬೊಮ್ಮನಹಳ್ಳಿ, ರಾಜರಾಜೇಶ್ವರಿ ನಗರ, ದಾಸರಹಳ್ಳಿ ಮತ್ತು ಬ್ಯಾಟರಾಯನಪುರ ಎಂದು 5 ವಿಭಾಗಗಳಾಗಿ ವಿಂಗಡಿಸಲಾಗಿದೆ.

ಈ ಬಿಬಿಎಂಪಿಯ 110 ಹಳ್ಳಿಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಕೈಗೊಂಡಿರುವ ಯೋಜನೆಯು ಪೂರ್ಣಗೊಂಡಿದ್ದು, ರೈಲ್ವೇ, ಟ್ರೆಂಚ್‌ಲೆಸ್ ಕ್ರಾಸಿಂಗ್, ಪ್ರಮುಖ ರಸ್ತೆಗಳು, 66ಕೆವಿ ಜೋಡಣೆ, ಪ್ರಮುಖ ಗೇಲ್ (GAIL) ಗ್ಯಾಸ್ ಲೈನ್ ಜೋಡಣೆಯ ಕಾರಣದಿಂದಾಗಿ ROW ಸಮಸ್ಯೆಗಳು ಬಾಕಿ ಉಳಿದಿರುತ್ತವೆ. 110 ಹಳ್ಳಿಗಳ ಎಲ್ಲಾ 5 ವಲಯಗಳಲ್ಲಿನ ವಿತರಣೆ, ಉಪ ಫೀಡರ್ ಮತ್ತು ಫೀಡರ್ ಜೋಡಣೆಯ ಒಟ್ಟು ವ್ಯಾಪ್ತಿ 2662 ಕಿಮೀ ಆಗಿದ್ದು, ಇಲ್ಲಿಯವರೆಗೂ 2468 ಕಿಮೀ ಸಂಪರ್ಕ ಕಾಮಗಾರಿಯನ್ನು ಕಾರ್ಯಗತಗೊಳಿಸಲಾಗಿರುತ್ತದೆ.

ಮೇಲೆ ತಿಳಿಸಿದ 110 ಹಳ್ಳಿಗಳ ನೀರು ಸರಬರಾಜು ಯೋಜನೆಯ ಕಾಮಗಾರಿಯು ಡಿಸೆಂಬರ್ 2019ರಲ್ಲಿ ಪೂರ್ಣಗೊಳ್ಳಲಿದ್ದು, ಬಾಕಿ ಉಳಿದಿರುವ ಕೆಲವು ಅಡೆತಡೆಗಳು ಹಾಗೂ ROW ಸಮಸ್ಯೆಗನ್ನು ಹಂತಹಂತವಾಗಿ ಪೂರ್ಣಗೊಳಿಸಲಾಗುವುದು.

ಬೆಂಗಳೂರು ಜಲಮಂಡಲಿಯು ಪ್ರತಿ ಹಂತಕ್ಕೂ ಪಂಪಿಂಗ್ ಲೈನ್ ಮೂಲಕ ಹಂತ-1, ಹಂತ-2, ಹಂತ-3, 4ನೇ ಹಂತ 1ನೇ ಘಟ್ಟ ಮತ್ತು 4ನೇ ಹಂತ 2ನೇ ಘಟ್ಟದ 2 ಹಂತಗಳಲ್ಲಿ ಸಂಸ್ಕರಣಾ ಘಟಕಗಳಿಂದ ಪಂಪ್ ಮಾಡುವ ಮೂಲಕ ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಎಲ್ಲಾ 4 ಹಂತಗಳಲ್ಲಿ ಪಂಪ್‌ಗಳನ್ನು ವರ್ಷವಿಡೀ ಪೂರ್ಣ ಸಾಮರ್ಥ್ಯಕ್ಕೆ ನಡೆಸಲಾಗುತ್ತಿದೆ ಮತ್ತು ಪೈಪ್‌ಲೈನ್ ಮೂಲ ಸೌಕರ್ಯದ ಗರಿಷ್ಠ ಕಾರ್ಯಾಚರಣೆಯ ಸಾಮರ್ಥ್ಯದೊಂದಿಗೆ 1450 ಎಂ.ಎಲ್.ಡಿ ನೀರನ್ನು ಬೆಂಗಳೂರು ನಗರಕ್ಕೆ ಪ್ರತಿದಿನ ಸರಬರಾಜು ಮಾಡಲಾಗುತ್ತಿದೆ. ಬೆಂಗಳೂರು ನಗರಕ್ಕೆ ನೀರು ಸರಬರಾಜು ಸಂಪರ್ಕವನ್ನು ಕೋರ್ ಪ್ರದೇಶ, ಹಿಂದಿನ ಸಿಎಂಸಿ ಪ್ರದೇಶ, 110 ಹಳ್ಳಿ ಪ್ರದೇಶಗಳ ಆಧಾರದ ಮೇಲೆ ವಿಂಗಡಿಸಲಾಗಿದೆ.

ಆರಂಭದಲ್ಲಿ ಜಲಮಂಡಲಿಯ 5ನೇ ಹಂತದ CWSS (ಕಾವೇರಿ ನೀರು ಸರಬರಾಜು ಯೋಜನೆ) ಯನ್ನು ಜೈಕಾ (ಜಪಾನ್ ಇಂಟರ್‌ನ್ಯಾಷನಲ್ ಕೋ ಆಪರೇಟಿವ್ ಏಜೆನ್ಸಿ) ಸಾಲದ ಹಣಕಾಸಿನ ನೆರವಿನೊಂದಿಗೆ ತೆಗೆದುಕೊಳ್ಳಲು ಪ್ರಸ್ತಾಪಿಸಲಾಗಿತ್ತು, ಇದರಡಿಯಲ್ಲಿ ಪಂಪ್ ಹೌಸ್, ಫಿಲ್ಟರ್ ಟ್ರೀಟ್‌ಮೆಂಟ್ ಪ್ಲಾಂಟ್, ಟ್ರಾನ್ಸ್‌ಮಿಷನ್ ಲೈನ್, ಜಿಎಲ್‌ಆರ್, ಸಿಟಿ ಟ್ರಂಕ್ ಮೇನ್, ಫೀಡರ್‌ಗಳು, 110 ಹಳ್ಳಿಗಳಿಗೆ Distribution Network, ಸಬ್ ಫೀಡರ್‌ಗಳು ಮತ್ತು ಒಳಚರಂಡಿ ಸಂಸ್ಕರಣಾ ಘಟಕ, 110 ಹಳ್ಳಿಗಳಿಗೆ Trunk Sewers, ಸಬ್ ಮೇನ್‌ಗಳು, ಹಾಗೂ ಲ್ಯಾಟರಲ್ಸ್ ಅನ್ನು ಕಾಮಗಾರಿಯ ಒಳಚರಂಡಿ ಘಟಕದಲ್ಲಿ ಅಳವಡಿಸುವ ಕಾಮಗಾರಿ.

ಈ ಸದರಿ ಕಾಮಗಾರಿಯನ್ನು ತೆಗೆದುಕೊಳ್ಳಲು ಸಾಲದ ಅನುಮೋದನೆ ಕಾರ್ಯದಲ್ಲಿ ವಿಳಂಬವಾಗುತ್ತಿದ್ದ ಕಾರಣದಿಂದಾಗಿ, ಕರ್ನಾಟಕ ಸರ್ಕಾರವು ಮೂಲಸೌಕರ್ಯದ ಒಂದು ಭಾಗಕ್ಕೆ ಸ್ವಯಂ ಧನ ಸಹಾಯಕ್ಕಾಗಿ ನಿರ್ಧಾರ ತೆಗೆದುಕೊಂಡಿತು. ಅದರಡಿಯಲ್ಲಿ 110 ಹಳ್ಳಿಗಳಿಗೆ ಫೀಡರ್‌ಗಳು, ಉಪ ಫೀಡರ್‌ಗಳು ಮತ್ತು ವಿತರಣಾ ಮಾರ್ಗವನ್ನು ನೀರಿನ ಘಟಕ, ಓ.ಹೆಚ್.ಟಿ ಮತ್ತು ಒಳಚರಂಡಿ ಲ್ಯಾಟರಲ್ಸ್‌ಗಳ ಕಾಮಗಾರಿಗಳನ್ನು ಕ್ರಮವಾಗಿ 110 ಹಳ್ಳಿಗಳ ನೀರು ಸರಬರಾಜು ಯೋಜನೆ ಮತ್ತು 110 ಹಳ್ಳಿಗಳ ಯುಜಿಡಿ ಲ್ಯಾಟರಲ್ಸ್ ಎಂದು ವಿಭಾಗಿಸಲಾಯಿತು.

5ನೇ ಹಂತದ CWSS ನೀರಿನ ಘಟಕದ ಯೋಜನೆಯ ದರಖಾಸ್ತು ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಕಾಮಗಾರಿಯನ್ನು ಸೆಪ್ಟಂಬರ್ 2019 ರಿಂದ ಪ್ರಾರಂಭಿಸಲು ಯೋಜಿಸಲಾಗಿದೆ. 5ನೇ ಹಂತದ CWSS ಒಳಚರಂಡಿ ಘಟಕದ (110 ಹಳ್ಳಿ – ಸಬ್ ಮೇನ್‌ಗಳು ಮತ್ತು ಟ್ರಂಕ್ ಸೀವರ್ಸ್) ಯೋಜನೆಯು ಡಿ.ಪಿ.ಆರ್ ಹಂತದಲ್ಲಿದ್ದು, ಜಲಮಂಡಲಿಯು  ಹಾಗೂ ನೀರು ಮತ್ತು ಒಳಚರಂಡಿ ಎರಡೂ ಯೋಜನೆಗಳಿಗೆ ಏಕಕಾಲದಲ್ಲಿ ಧನ ಸಹಾಯ ನೀಡಲು ಒಪ್ಪಿಕೊಳ್ಳುವಂತೆ ಪ್ರಸ್ತಾಪಿಸಿದ್ದು, ಜೈಕಾ ಸಂಸ್ಥೆಯು ಬೆಂಗಳೂರು ನಗರದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ನೀರು ಮತ್ತು ಒಳಚರಂಡಿ ಎರಡೂ ಯೋಜನೆಗಳಿಗೆ ಏಕಕಾಲದಲ್ಲಿ ಧನ ಸಹಾಯ ನೀಡಲು ಒಪ್ಪಿಕೊಂಡಿರುತ್ತದೆ.

ಕರ್ನಾಟಕ ಸರ್ಕಾರದ ನೆರವಿನಡಿಯಲ್ಲಿ 110 ಹಳ್ಳಿಗಳ ಒಳಚರಂಡಿ (ಲ್ಯಾಟರಲ್ಸ್) ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಯೋಜನೆಯನ್ನು ಮಹದೇವಪುರ, ಬೊಮ್ಮನಹಳ್ಳಿ ಮತ್ತು ದಾಸರಹಳ್ಳಿ ಎಂದು 3 ವಲಯಗಳಾಗಿ ವಿಂಗಡಿಸಲಾಗಿರುತ್ತದೆ. ಕಾಮಗಾರಿಯನ್ನು ದರಖಾಸ್ತು ಪ್ರಕ್ರಿಯೆಯ ಮೂಲಕ ಕೈಗೆತ್ತಿಕೊಂಡು ಮಾರ್ಚ್ 2018ರಲ್ಲಿ ಪ್ರಾರಂಭಿಸಿದ್ದು, 36 ತಿಂಗಳುಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಇಲ್ಲಿಯವರೆಗೂ ಒಟ್ಟು 1568 ಕಿಮೀಗಳಲ್ಲಿ 422 ಕಿಮೀನಷ್ಟು ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

ಬಿಬಿಎಂಪಿಯ 110 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ನಗರದ ಕೆಲವು ಸೀಮಿತ ಭಾಗಗಳಿಗೆ ನೀರು ಸರಬರಾಜು ಮಾಡಲಾಗುತ್ತಿದ್ದು ಇದು ಬೆಂಗಳೂರಿನ ಕೋರ್ ಏರಿಯಾದ ನೀರಿನ ನಷ್ಟದ ಪ್ರಮಾಣವನ್ನು ಕಡಿಮೆ ಮಾಡಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಸದರಿ ಪ್ರಮಾಣದ ನೀರನ್ನು ಕಾವೇರಿ 5ನೇ ಹಂತದ ಯೋಜನೆಯಿಂದ ಒದಗಿಸುವವರೆಗೂ ಬಳಸಿಕೊಳ್ಳಲಾಗುವುದು, ತದನಂತರ ಕಾವೇರಿ 5ನೇ ಹಂತದ ನೀರಿನ ಘಟಕದ ಮೂಲಸೌಕರ್ಯಗಳಾದ WTP (Water Treatment Plant), ಪಂಪ್ ಹೌಸ್ 3 ಹಂತಗಳಲ್ಲಿ, ಟ್ರಾನ್ಸ್‌ಮಿಷನ್ ಲೈನ್, ಸಿಟಿ ಜಿಎಲ್‌ಆರ್, ಸಿಟಿ ಕನೆಕ್ಟಿಂಗ್ ಟ್ರಂಕ್ ಮೇನ್‌ಗಳು, 775 ಎಂ.ಎಲ್.ಡಿ ನೀರನ್ನು ಪ್ರತಿ ದಿನವೂ ತರಲು ಸಿದ್ಧಪಡಿಸಿ ಹಾಗೂ ಕಾರ್ಯನಿರ್ವಹಿಸುತ್ತದೆ.

110 ಹಳ್ಳಿಗಳ ಪ್ರದೇಶದ ವಿಸ್ತೀರ್ಣವು 225 ಚ.ಕಿ.ಮೀ ಹಾಗೂ ಸುಮಾರು 15 ಲಕ್ಷ ಜನಸಂಖ್ಯೆ ಹೊಂದಿದ್ದು, ಇದಕ್ಕಾಗಿ CWSS 5ನೇ ಹಂತದ ಯೋಜನೆಯು 2049 ರವರೆಗೆ ಭವಿಷ್ಯದ ಬೆಳವಣಿಗೆಯನ್ನು

ಗಣನೆಗೆ ತೆಗೆದುಕೊಂಡು ನೀರಿನ ಅಗತ್ಯತೆಗಳನ್ನು ಪೂರೈಸುತ್ತದೆ. CWSS 5ನೇ ಹಂತದ ಯೋಜನೆಯು ಒಟ್ಟಾರೆಯಾಗಿ ಬೆಂಗಳೂರು ನಗರದ ನೀರಿನ ಅಗತ್ಯವಾದ ಪರಿಹಾರವನ್ನು ಒದಗಿಸುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ, ಕಾವೇರಿ 5ನೇ ಹಂತದ ಯೋಜನೆ ಅಡಿಯಲ್ಲಿ ನೀರು ಮತ್ತು ಒಳಚರಂಡಿ ಎರಡೂ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ದೂರನ್ನು ಕೈಬಿಡುವಂತೆ ವಿನಮ್ರವಾಗಿ ವಿನಂತಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಹಿ/-
ಮುಖ್ಯ ಅಭಿಯಂತರರು(ಯೋಜನೆ)
ಬೆಂಗಳೂರು ಜಲಮಂಡಲಿ".

3. The status report extracted above indicates that, the Under Ground Drainage (UGD) work taken up by BWSSB in respect of 110 villages were divided into five divisions/ zones consisting of Mahadevapura, Bommanahalli, Rajarajeshwarinagar, Dasarahalli and Byatarayanapura and the said work had commenced in March 2018 and as per the project report, the said work is expected to be completed within 36 months. The report further discloses that, out of 1568 Kms., of UGD work, 422 Kms., of UGD work is under progress. However, so far as the water supply project is concerned, it is pointed out that the work regarding supply of water for 110 villages is expected to be

completed by December 2019 and few other issues like construction of Ground Level Reservoir (GLR) and Feeder Main would be completed, stage by stage, thereafter. According to Sri.B.Shivaprasad, it is likely to take another two years from December 2019. It is submitted by all the Engineers, who are present today, that the work is being carried out by BWSSB without giving scope for any delay or laxity and as per the schedule fixed in the tender notification. It is also pointed out by them that it is only after the completion of Cauvery 5th Stage Water Supply Project, the BWSSB will be able to supply water to all the 110 villages which have become part of the Bruhat Bengaluru Mahanagara Palike (herein after referred to as **'BBMP'** for short). May be that on account of the inclusion of 110 villages covering a radius of 225 Sq.Kms., there are certain practical difficulties in completing the project in the matter of organizing supply of water to all the residents of 110 villages which have become part of BBMP. But, that does not mean that the BWSSB and BBMP can absolve themselves of all the statutory responsibility in taking effective steps for supply of water to the residents of

Bengaluru City, who are part of BBMP, which is inclusive of 110 villages, referred to above.

4. It also may be necessary to refer to one other aspect of the matter. It is well known that there is scarcity of water. In view of that, it is desirable that the concerned authorities are required to create awareness among the members of the public by regularly educating the people through their officers or NGOs about economic/limited quantity of water to be used for day-to-day purpose and to save water in public interest. It has come to my notice that in many apartments, only one pipeline is connected to the flats and one meter is fixed though the apartments may contain large number of flats. Since the inmates of the flats are only required to share the total bill issued to one meter installed in the apartment, there may not be serious interest for economic/judicious use of the water by all the inmates of different apartments. These are the matters on which BWSSB, BBMP and other authorities of the State are required to examine and take a conscious decision to direct these apartment owners/inmates to provide separate meter for each of the flat. This will also to a large extent avoid

unnecessary internal disputes among the flat owners with regard to the quantity of water that each one of the inmates of the flats may use. I am sure, in the light of the observation made above, the matter will be examined and positive steps will be taken on that behalf.

5. **The Respondents are given time till the end of December 2019 to file the status report** with regard to the steps they have taken and progress they have made. On such a status report being filed, the ARE-1 to go through the same and submit scrutiny note by **16-01-2020**. The presence of the parties on the next date of hearing is dispensed with.

6. Communicate this order to the Respondents.

List this case on **16-01-2020.**

(Justice P. Vishwanatha Shetty), 3/7/2019.
Lokayukta,
Karnataka State.

**AS***

5) 16/01/2020.
ಗೌ. ಲೋಕಾಯುಕ್ತ-
-ರವರ ಆದೇಶದಂತೆ
ಎದುರುದಾರರಿಗೆ ನೋಟೀಸ್
ಜಾರಿ ಮಾಡಿದ್ದು, ಸ್ಥಿತಿ
ಮಂಡಿಸಿದೆ.
ಮುಖ್ಯ ಅಭಿಯಂತರರು-ಬೆಂಗಳೂರು,
ಕಾರ್ಯಪಾಲಕ ಅಭಿಯಂತರರು-
ಬೆಂಗಳೂರು ವಿಭಾಗ & ಬ್ಯಾಟರಾಯನಪುರ

ARE-1.

ವಿಭಾಗ, ಕೆಲಬು ವಾಡಿ ರವರ
ವರದಿ ದಿ: 19/07/2019
ಬಂದಿರುತ್ತದೆ.
ಮುಖ್ಯ ಅಭಿಯಂತರರು
& Chairman, BWSSB,
ಜಿಲ್ಲಾಧಿಕಾರಿಗಳು, ಬೆಂಗಳೂರು
ನಗರರವರಿಂದ ವರದಿ ಬಂದಿ-
-ರುವುದಿಲ್ಲ.

[signature]

To put up scrutiny note by 4/2

[signature] 22/1

6) 04/02/2020.
ಮುಂದಿನ ಕ್ರಮಕ್ಕಾಗಿ
ಮಂಡಿಸಿದೆ.

[signature]

ARE-1.

To put up further scrutiny note by 8/4

[signature] 4/2

05.2020

ರೋನ ವೈರಸ್‌ನ ಪಿಡುಗಿನಿಂದ ಲಾಕ್‌ಡೌನ್
ೀಷಣೆ ಮಾಡಿದ್ದರಿಂದ ಪ್ರಕರಣವನ್ನು
ೇಶಕ್ಕೆ ನಿಗಧಿತ ದಿನಾಂಕದಂದು
ಂಡಿಸಲಾಗಿಲ್ಲ. ಮಾನ್ಯರ ಮುಂದಿನ
ೇಶಕ್ಕಾಗಿ ಕಡತವನ್ನು ಮಂಡಿಸಿದೆ.

ಮುಂದಿನ ಕ್ರಮಕ್ಕಾಗಿ ಪ್ರಕರಣವನ್ನು
ದಿನಾಂಕ: 02.07.2020ರಂದು ಮಂಡಿಸತಕ್ಕದ್ದು.

[signature] /5

**ARE-1**

8) [illegible].7.2020

[illegible]

[signature]
ARE-1)

For final hearing now
[illegible] 7.9.2020
[signature] 7.9.2020
ARE-1 (Addl. Chg)

As per Official Memorandum number LOK/RGR/Compt.LOK/2020 dated 28.07.2020 of Registrar, Karnataka Lokayukt noted at serial 109 of the list enclosed to the above Official Memorandum this file is tranferred and therefore placed before ARE-10.

[signature] 10-8-2020

**ARE-1 (Additional Charge)**

10) 07/09/2020

ಮಾನ್ಯರ ಮುಂದಿನ ಕ್ರಮಕ್ಕಾಗಿ ಮಂಡಿಸಿದೆ.

for [illegible] 10/11/2020

[illegible] 07/9

11) 10/11/2020

ಮಾನ್ಯರ ಮುಂದಿನ ಕ್ರಮಕ್ಕಾಗಿ ಮಂಡಿಸಿದೆ.

for [illegible] 31/12/2020

[illegible] 10/11

12) 31/12/2020

ಮಾನ್ಯರ ಮುಂದಿನ ಕ್ರಮಕ್ಕಾಗಿ ಮಂಡಿಸಿದೆ.

for further security scrutiny note 30/01/2021

[illegible] 31/12

Compt/Lok/BCD/946/2019/
ARE-10

13) 30/01/2021

ಮಾನ್ಯರ ಮುಂದಿನ
ಕ್ರಮಕ್ಕಾಗಿ ಮಂಡಿಸಿದೆ

For FSN
10/03/2021

30/01

14) 10/03/2021

ಮಾನ್ಯರ ಮುಂದಿನ
ಕ್ರಮಕ್ಕಾಗಿ ಮಂಡಿಸಿದೆ.

For FSN
12/04/21

10/03

**BCD-946/2019**
Dt. 12/04/2021

15) 12/04/2021

ಮಾನ್ಯರ ಮುಂದಿನ
ಕ್ರಮಕ್ಕಾಗಿ ಮಂಡಿಸಿದೆ.

Regular Officer is on Leave.

For Further Scrutiny Note by **12/05/2021**

12/4

ARE-6 I/c
ARE-10